Doc-277
T.P-2

R No KRNN 12 20-4-71

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

First Golden Jubilee Celebrated Paper in The State

** Now in 57 th Year **

'Satyavadi' daily, Mysore 4

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ವಿದ್ವಾಂಸ್ ಚಾರವಿಂತ ಎಂ. ಎಸ್. ಕೃಷ್ಣರಾವ್ 3 ಪೈಸೆ

ವಿನಾಶಕಾರಿ ಕ್ರಾಂತಿ ಆದೀತು

ವಕೀಲರ ಕೇಳಿಕೆ

ಸವಣೂರು— ಸ್ಥಳೀಯ ವಕೀಲರ ಸಂಘದ ಅಧ್ಯಕ್ಷರು, ನ್ಯಾಯಾಂಗ ಮಂತ್ರಿಯವರಿಗೆ ಅರ್ಪಿಸಿದ ಮನವಿಪತ್ರದಲ್ಲಿ, ಹೊಸ ಭೂಸುಧಾರಣಾ ಶಾಸನ ಸಂಬಂಧದಲ್ಲಿ ಲಾಯರುಗಳು ಹಾಜರಾಗುವ ಅವಕಾಶವನ್ನು ಪ್ರತಿಬಂಧಿಸಿರುವದನ್ನು ತೆಗೆದು ಹಾಕಬೇಕೆಂದೂ, ಜೀವನ ವೆಚ್ಚ ಹೆಚ್ಚಿರುವದರಿಂದ ವಕೀಲರ ಶುಲ್ಕವನ್ನು ಶೇಕಡ 9 ಹೆಚ್ಚಿಸಬೇಕೆಂದೂ ಕೇಳಿರುವರು.

ಹೆಚ್ಚು ಅಕ್ಕಿ ಸೇವಿಸಿದ್ದಕ್ಕೆ

ಇಂಡೋನೇಷಿಯಾದ ಮೆಡನಾಡಿನ ಮದ್ಯ ಕಾರ್ಖಾನೆಯ ಇಬ್ಬರು ಕಾರ್ಮಿಕರು ಹೆಚ್ಚು ಅಕ್ಕಿ ಸೇವಿಸಿದ ಆರೋಪನೆಗಾಗಿ ಕೆಲಸದಿಂದ ವಜಾಮಾಡಲ್ಪಟ್ಟರು.

ಮನುಸ್ಮೃತಿಯಲ್ಲಿ ಗೋಹತ್ಯದ ಅಘೋರತೆ

ಆಚಾರ್ಯಂ ಚ ಪ್ರವಕ್ತಾರಂ ಪಿತರಂ ಗುರುವರ್
ನ ಹಿಂಸ್ಯಾತ್ ಬ್ರಾಹ್ಮಣಾನ್ ಗಾಂಶ್ಚ ಸರ್ವಾಶ್ಚೈವ ತಪಸ್ವಿನಃ ॥
(ಮನುಸ್ಮೃತಿ 4-162)

ಉಪಾಧ್ಯಾಯ, ಶಾಸ್ತ್ರಪ್ರತಿಪಾದಿಸುವವ, ತಂದೆ, ತಾಯಿ, ಗುರು, ಬ್ರಾಹ್ಮಣ ಗೋವು, ಯತಿ, ಇವರುಗಳನ್ನು ಎಂದು ಕೊಲ್ಲಕೂಡದು. [ಮನುಸ್ಮೃತಿ 4-162]

ಮೇಲಿನ ಶ್ಲೋಕದಲ್ಲಿ ನಿರ್ದೇಶಿಸಿರುವ ಜನರ ಕೊಲೆಯು ಗೋಹತ್ಯೆಗೆ ಸಮಾನ ಮಾಡಲಾಗಿದೆ : ಬೇರೆ ಮಾತುಗಳಲ್ಲಿ ಹೇಳುವುವಾದರೆ, ಗೋಹತ್ಯೆಯು, ಉಪಾಧ್ಯಾಯ, ಶಾಸ್ತ್ರಪ್ರತಿಪಾದಕ, ತಂದೆ, ತಾಯಿ, ಗುರು, ಮತ್ತು ಬ್ರಾಹ್ಮಣನ ಕೊಲೆಗೆ ಸಮತ್ವವಾಗಿದೆ.

ಕ್ರೈಸ್ತಮತದಲ್ಲಿ ಗೋಹತ್ಯೆಯು ಅತಿನಿಂದತೆ

ಒಂದು ಎತ್ತನ್ನು ಕೊಲ್ಲುವವನು, ಒಬ್ಬ ಮನುಷ್ಯನನ್ನು ಕೊಂದಂತಾಗುವುದು
[ಇಸಾಯ 66/3]

ಇಂಗ್ಲೀಷು ನಿಘಂಟುಗಳಂತೆ "ಎತ್ತು" ಗೋವಂಶದ ಗಂಡು ಹೆಣ್ಣು ತಳಿಗೆ ಆಗಿದೆ.

ಇಸ್ಲಾಂನಲ್ಲಿ ಗೋಮಾಂಸ ನಿಷೇಧ

ಅಲ್ ಘಾಜ್ಜಾಲಿ [ಕಿ ಶ. 1058-1111] ಇಸ್ಲಾಂನ ಅತ್ಯಂತ ಹೇದೀಹ್ಯ ಮಾನವಾದ ತತ್ವಜ್ಞಾನಿ ; ಈತನು ತನ್ನ 28 ನೇ ವಯಸ್ಸಿನಲ್ಲಿ ಬಾಗ್ದಾದಿನ ಇಸ್ಲಾಂ ಸಂಸ್ಥೆಯ ಮುಖ್ಯಸ್ಥನಾಗಿದ್ದನು ಆತನ ಮುಖ್ಯ ಪುಸ್ತಕ "ಇಹ್ಯಾ ಉಲುಂ ಉಲ್ ದಿನ್" (ಮತೀಯ ವಿಜ್ಞಾನದ ಪುನರ್‌ಸ್ಥಾಪನೆ) ಕುರಾನಿನಷ್ಟೇ ಉನ್ನತ ಮಟ್ಟದಲ್ಲಿ ಗೌರವಿಸಲಾಗಿದೆ ; ಅದರ ಉರ್ದು ಭಾಷಾಂತರವು ಲಕ್ನೋದ ನವಾಲ್ ಕಿಶೋರ್ ಪ್ರೆಸ್‌ನಲ್ಲಿ "ಮಾಜಾಕುಲ್ ಆರಾಫಿ" ಎಂಬ ನಾಮಾಂಕಿತವೆಂದ ಪ್ರಕಟಿಸಲಾಗಿದೆ ; ಅದರ 1951 ನೇ ಪರಿಷ್ಕರಣದಲ್ಲಿ (ಭಾಗ 2, ಪುಟ 23, ಸಂಗ್ತಿ 17-19) ಗೋಮಾಂಸದ ಹಾನಿ, ಹಸುವಿನ ತುಪ್ಪ ಹಾಲುಗಳ ದಿವ್ಯ ಗುಣಗಳನ್ನು ಈ ರೀತಿ ತಿಳಿಸಲಾಗಿದೆ—

" ಗೋವಿನ ಮಾಂಸ ವ್ಯಾಧಿ, ಅದರ ಹಾಲು ಆರೋಗ್ಯ, ಅದರ ತುಪ್ಪ ಔಷಧ "

ಸಾಮೂಹಿಕ ಕ್ರಾಂತಿ

ಶಿವಮೊಗ್ಗ— ದೇಶದ ನಾಯಕರು ತಮ್ಮ ಸ್ವಾರ್ಥತೆ ತ್ಯಜಿಸದಿದ್ದರೆ, ಸಾಮೂಹಿಕ ವಿನಾಶಕಾರಿ ಕ್ರಾಂತಿ ಪ್ರಾರಂಭವಾಗುವದೆಂದು ಶ್ರೀ ಚಿನ್ಮಯಾನಂದಸ್ವಾಮಿ ಇಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು — ಭಾರತದ ರಾಷ್ಟ್ರೀಯತೆಯು ಗಾಂಧೀಜೀಯವರೊಂದಿಗೇ ಹೂಳಲ್ಪಟ್ಟಿತೆಂದು ವಿಷಾದಿಸಿದರು.

●

ಕುದುರೆ ಜೂಜು

ಮೈಸೂರು— ರೇಸ್ ಕ್ಲಬ್ ಆಶ್ರಯದಲ್ಲಿ ಇಲ್ಲಿ ಆಗಸ್ಟ್ 11 ರಿಂದ ಅಕ್ಟೋಬರ 16 ರವರಿಗೆ ಕುದುರೆ ಪಂದ್ಯಗಳು ನಡೆಯಲಿವೆ

★

ಅಕ್ಕಿ ವಶ

ಮೈಸೂರು — ವಿಶೇಷ ಆಹಾರ ಶಾಖೆಯು ಕೃಷ್ಣರಾಜನಗರದಲ್ಲಿ ಅಕ್ಕಿ ಗಿರಣಿಗಳ ಮೇಲೆ ಧಾಳಿ ನಡೆಸಿ, 7500 ಕ್ವಿಂಟಾಲು ಅಕ್ಕಿ ವಶಪಡಿಸಿಕೊಂಡರು.

★

ಸಾಧುವಿನ ಶವ

ಬೆಂಗಳೂರು— ಮುಖ್ಯ ರಸ್ತೆಯಲ್ಲಿ ತನ್ನ ಪುನೆಯಲ್ಲಿ ಹೂಳಲಾಗಿದ್ದ ಸಾಧು ಮಾಣಿಕ ಶಿವನ ಶವವನ್ನು ಕಾರ್ಪೋರೇಷನ್ನಿನವರು ಅಲ್ಲಿಂದ ತೆಗೆದು ಕಾರ್ಪೋರೇಷನ್ ಸ್ಮಶಾನದಲ್ಲಿ ಹೂಳಿಸಿದ್ದುದನ್ನು ಹೈ ಕೋರ್ಟು ಆಜ್ಞೆಯಂತೆ ಅಲ್ಲಿಂದ ತೆಗೆದು, ವೈಟ್ ಫೀಲ್ಡಿನ ಕತ್ತರ ಬೀಗೇಹಳ್ಳಿ ಮಶಕ್ಕೆ ತೆಗೆದುಕೊಂಡುಹೋಗಿ ಅಲ್ಲಿ ಸಮಾಧಿ ಮಾಡಲಾಯಿತು

★

ಸಿನಿಮಾಮಂದಿರ ಬಂದ್

ನಾಗಪುರ— ರೂ 10 ಲಕ್ಷ ಮನರಂಜನಾ ತೆರಿಗೆ ಬಾಕಿಗಾಗಿ ಸರಕಾರ 3 ಸಿನಿಮಾ ಮಂದಿರಗಳನ್ನು ಜಪ್ತಿಮುದ್ರೆಮಾಡಿತು

1 ರೂ. ನೋಟು ಬದಲು ನಾಣ್ಯ

ನವದೆಹಲಿ— ಒಂದು ರೂಪಾಯಿ ನೋಟುಗಳ ಬದಲು ರೂಪಾಯಿ ನಾಣ್ಯಗಳನ್ನು ಜಾರಿಗೆ ತರಲು ಸರಕಾರ ಯೋಚಿಸುತ್ತಿರುವದಾಗಿ ಲೋಕಸಭೆಯಲ್ಲಿ ತಿಳಿಸಲಾಯ್ತು

★

ಆಹಾರ ಸಾಗಾಣಿಕೆ

ಮಂಗಳೂರು— ಆಂತರ ಜಿಲ್ಲಾ ಆಹಾರ ಸಾಗಾಣಿಕೆ ಮೇಲಿನ ಪ್ರತಿಬಂಧಕವನ್ನು ತೆಗೆಯಲು ಸರ್ಕಾರವನ್ನು ಒತ್ತಾಯಿಸಿ ಮಾಡುವ ನಿರ್ಣಯವು ಪೌರಸಭೆಯಲ್ಲಿ ಸರ್ವಾನುಮತದಿಂದ ಮಂಜೂರಾಯಿತು.

○

ವಿಪರೀತ ಕುಡುಕರು

ಲಂಡನ್— ಬ್ರಿಟಿಷರು ಅತಿ ಹೆಚ್ಚು ಕುಡುಕರು ಮತ್ತು ಅತಿ ಸ್ವಲ್ಪ ತಿನ್ನುವವರು ಎಂದು ವ್ಯವಸಾಯ ಸಚಿವಾಲಯದ ವರದಿ ತಿಳಿಸುತ್ತದೆ.

★

ಕೇರಳ ಬಂದ್

ಕೊಚ್ಚಿ— ಮೇ 3 ರಂದು ದೇಶಾದ್ಯಂತ ಪ್ರತಿಭಟನ ದಿನ ಆಚರಿಸುವ ಯೋಜನೆ ಸಂದರ್ಭದಲ್ಲಿ, ಕೇರಳ ಬಂದ್ ಆಚರಿಸಲು 5 ವಿರೋಧ ಪಕ್ಷಗಳು ನಿರ್ಧರಿಸಿವೆ.

★

ತೇಲುವ ಫಲಹಾರ ಮಂದಿರ

ನವದೆಹಲಿ— 50 ಜನರು ಕೂತುಕೊಳ್ಳಬಹುದಾದ ಒಂದು ತೇಲುವ ಫಲಾಹಾರ ಮಂದಿರವು, ಗ್ರಾಂಡ್ ಟ್ರಂಕ್ ರೋಡ್ ಬಖಾರಾ ಕಾಲೂವೆಯಲ್ಲಿನ ಶಿರ್‌ಹಿಂದ್‌ನಲ್ಲಿ, ಪಂಜಾಬು ಸರಕಾರವು ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಸ್ಥಾಪಿಸಲಿದೆ.

★ ಡಮಾಸ್ಕಸ್ — ಸಿರಿಯವು ಇಸ್ರೇಲಿಯ 7 ಯುದ್ಧವಿಮಾನಗಳನ್ನು ಹೊಡೆದುರುಳಿಸಿತು – ಮೌಂಟ್ ಹಿಂನ್ ಮೇಲೆ ಸಮರ ತೀವ್ರವಾಗಿ ನಡೆಯುತ್ತಿದೆ.

ದಿವ್ಯವಾಣಿ

ಆಹಾರ ಶುದ್ಧಿಯಿಂದ ಸತ್ವ ಶುದ್ಧಿಯೂ, ಸತ್ವಶುದ್ಧಿಯಿಂದ ಧ್ರುವಸ್ಮೃತಿವಾಸ ಯೂ, ಧ್ರುವಾಸ್ಮೃತಿಯಿಂದ ಸರ್ವಗ್ರಂಥಿಗಳ ಬಿಡುಗಡೆಯೂ ಲಭಿಸುತ್ತದೆ; ಅರ್ಥಾತ್ ಒಗರಿಳಿದ ಅಂಥವನನ್ನು ಸನತ್ಕುಮಾರನು ಅಜ್ಞಾನಾಂಧಕಾರದ ಆಚೆಗೆ ಪಾಟ ಸುವನು. — ಛಾಂದೋಗ್ಯ ಉಪನಿಷತ್ತು.

ಸ್ಮೃತಿಭ್ರಂಶಾದ್ ಬುದ್ಧಿನಾಶಃ. — ಶ್ರೀಮದ್ಭಗವದ್ಗೀತೆ.

ವಕೀಲರ ಚಳವಳಿ

ಬಿಜಾಪುರ— ಸ್ಥಳೀಯ ವಕೀಲ ಸಂಘದವರು ಡೆಪ್ಯೂಟಿ ಮತ್ತು ಅಸಿಸ್ಟೆಂಟ್ ಕಮಿಷನರವರ ಕಚೇರಿಗೆ ಬಹಿಷ್ಕಾರ ಹಾಕಿರುವರು ; ಇಬ್ಬರು ಅಧಿಕಾರಿಗಳನ್ನು ವರ್ಗಾಯಿಸಬೇಕೆಂಬುದು ಅವರ ಕೇಳಿಕೆ – ನ್ಯಾಯಾಂಗ ಮತ್ತು ಪೌರಾಡಳಿತ ಮಂತ್ರಿ ಶ್ರೀ ನಾಯ್ಕರರನ್ನು ಕಂಡು ತಮ್ಮ ದೂರನ್ನು ನಿವೇದಿಸಿದರು.

ಭೂಸುಧಾರಣಾ ತಿದ್ದುಪಡಿ ಶಾಸನ ವಿರುದ್ಧ ರಿಟ್

ಬೆಂಗಳೂರು— ಭೂ ಸುಧಾರಣಾ ತಿದ್ದುಪಡಿ ಕಾನೂನಿನಲ್ಲಿಯ ಹಲವು ವಿಚಾರಗಳ ಕಾನೂನ್ಬದ್ಧತೆ ಪ್ರಶ್ನಿಸಿ, ಚಿತ್ರದುರ್ಗದ ಮುರುಘರಾಜೇಂದ್ರ ಸ್ವಾಮಿ ಮಠದವರು ಹೂಕಿರುವ ರಿಟ್ ಅರ್ಜಿಯ ಆಗಿ ತಡೆ ಆಜ್ಞೆ ಕೊಡಲಾಗಿದೆ.

ಚಿನ್ನಾಭರಣ ರಫ್ತು

ಬೊಂಬಾಯಿ— 73-74 ರಲ್ಲಿ ರತ್ನಗಳ ಮತ್ತು ಚಿನ್ನಾಭರಣಗಳ ರಫ್ತು ರೂ. 100 ಕೋಟಿಗೂ ವಿಸ್ತಾರವಿದೆ.

Quality Printing Neat Binding

Lakshminarasimha Press

Siveranpet, Mysore 1

ಭಾರತದಲ್ಲಿ ಗೋವಧೆ



ಪೂರ್ಣ ನಿಶೇಧವಾಗಲಿ

Contribute Liberally to the National Defence Fund.

ವುಡ್‌ಲಾಂಡ್ 19 4 74 ರಿಂದ

ಅವೋಘ ಆರಂಭ

ಪವಿತ್ರ ಪಾಪಿ

ಹಿಂದಿ ಕಲರ್ ಮಹೋನ್ನತ ಚಿತ್ರ ದಿನ 3 ಪ್ರದರ್ಶನಗಳು

ಪಾತ್ರ– ತನುಜ ಬಾಲರಾಜ ಸಹಾನಿ ಏ ಎಸ್ ಜೋಹರ್ ಜಯಶ್ರೀ

ಅಪೆರಾ 19 4 74 ರಿಂದ

ಅಡಿಮೈ ಪೆಣ್

ಪಾತ್ರ – ಎಂ ಜಿ ಆರ್ ಜಯಲಲಿತ

ರೋಮಾಂಚಕಾರಿ ತಮಿಳು ವರ್ಣ ಚಿತ್ರ

ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Protect the Cow

Help The Gorakshana

— HumanitarianPropoganda Monthly....

Edited Printed and Published by Dharmapracharanirata M S. Krishna Rao (Proprietor) at the Satvavadi Press, Chamarajapuram Mysore